Reg. No. | | | | | | | | | |

**BCAKAL 103/BADKAL 103/BSAKAL 103 (Kannada Language)/ BAPKAL 103/BFDKAL 105/BGDKAL 105/ BIDKAL 105 (Advanced Kannada)**

ಗುಣಾಂಕ ಆಧಾರಿತ (ಮೊದಲನೆಯ ಚತುರ್ಮಾಸ ಬಿ.ಸಿ.ಎ./ಬಿ.ಎಸ್ಸಿ. (ಅನಿಮೇಷನ್ ಮತ್ತು ವಿಜ್ಯುವಲ್ ಎಫೆಕ್ಟ್)/ಬಿ.ಎ. (ಸೆಕ್ಯೂರಿಟಿ ಅಂಡ್ ಡಿಟೆಕ್ಟಿವ್ ಸೈನ್ಸ್)/ಬಿ.ಎಸ್ಸಿ. (ಫ್ಯಾಷನ್ ಡಿಸೈನ್)/ಬಿ.ಎಸ್ಸಿ. (ಗಾರ್ಮೆಂಟ್ ಡಿಸೈನ್)/ಬಿ.ಎಸ್ಸಿ. (ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಷನ್) ಬಿ.ಎ.ಎಸ್.ಎಲ್.ಪಿ. ಪದವಿ ಪರೀಕ್ಷೆ, ಅಕ್ಟೋಬರ್/ ನವೆಂಬರ್ 2016

**(Common to all Batches)**

**KANNADA**

**Kannada Language/Advanced Kannada**

**ಪತ್ರಿಕೆ – 1**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 80

**ಭಾಗ – 1**

**(ಕಾವ್ಯ)**

I. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ : **(1×8=8)**

1) ಯುದ್ಧ ಭೂಮಿಯಲ್ಲಿ ಭೇಟಿಯಾದ ತಂದೆ ತಾಯಿಗೆ ದುರ್ಯೋಧನನು ಹೇಗೆ ಸ್ಪಂದಿಸಿದ ಎಂಬುದನ್ನು ವಿವರಿಸಿರಿ.

2) 'ಮೊಲದ ಕೋಡಾದುದು ಸೊಗಂ' ಪದ್ಯದ ಮಂಥರೆಯ ಪಾತ್ರ ವಿಶೇಷತೆಯನ್ನು ಕುರಿತು ಬರೆಯಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಪುರಾಕೃತ ಕರ್ಮಫಲಗಳು ಮನುಷ್ಯನನ್ನು ಕಾಡುತ್ತವೆ ಎಂಬುದಕ್ಕೆ ನಳಮಹಾರಾಜ ಹೇಗೆ ನಿದರ್ಶನವಾಗುತ್ತಾನೆ ? ವಿವೇಚಿಸಿರಿ.

2) 'ಕಾರಿಹೆಗ್ಗಡೆಯ ಮಗಳು' ಕವನದ ಪ್ರೇಮ ದುರಂತಕ್ಕೆ ಕಾರಣಗಳೇನು ? ವಿವರಿಸಿರಿ.

ಇ) ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಗಾಂಧಾರಿ 2) ಕನಕದಾಸ 3) ಕೈಕೆ

II. ಅ) ಕೆಳಗಿನ ಪದ್ಯಭಾಗಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ, ಮಹತ್ವವನ್ನು ವಿವೇಚಿಸಿರಿ : (1×5=5)

1) ಗುರುವಿನ ನೆತ್ತರಂ ಕುಡಿವೆನಪ್ಪೊಡವಂ ದ್ವಿಜವಂಶಜಂ ನಿಜಾ
ವರಜನ ನೆತ್ತರಂ ಕುಡಿವೆನಪ್ಪೊಡೆ ಭೀಮನೆಪೀರ್ದಂ ಭೀ
ಷ್ಮರ ಬಿಸುನೆತ್ತರಂ ಕುಡಿವೊಡಿನ್ನುಮೊಳಂ ಕುರುರಾಜ ನಿನ್ನನೆ
ತ್ತರ ಸವಿ ನೋಟ್ಟೆಂ ಬಯಸಿ ಬಾತಪನೆಂದುದದೊಂದು ಪುಲ್ಮರುಳ್

2) ಗರಳವಿದು ಸರ್ವಾಂಗದಲಿ ಸಂ
ಚರಿಸುತಿಹ ಪರಿಯಂತ ರಿಪುಗಳ
ಶರ ಜಲಾಗ್ನಿ ಭುಜಂಗ ರೋಗಾದಿಗಳ ಭಯವಿಲ್ಲ
ನಿರತವಿದು ವಜ್ರಾಂಗಿ ಬೇಡಿ
ನ್ನರಸ ಚಿಂತಿಸಬೇಡ ಕಾರ್ಯದ
ಹೊರಗೆ ತಾನಿದು ಬೇರೆ ಭಯ ಬೇಡಿನ್ನು ನಿನಗೆಂದ

ಆ) ಕೆಳಗಿನ ವಾಕ್ಯಗಳಲ್ಲಿ ಎರಡಕ್ಕೆ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ : (2×3=6)

1) ತೋರಮಾಣಿಕವೆಂದು ಪಿಡಿದರೆ ಭೂರಿ ಕೆಂಡವಿದಾಯ್ತು
2) ಕೊಂಡವ ಹಾಯಿದನು ಹೊಲೆಯನಾಳಾಗಿ
3) ದೇಶಭಕ್ತಿಯದೊಂದು ಸಣ್ಣ ಸೋಗು

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (5×1=5)

1) ಧೂರ್ಜಟಿ ಎಂದರೆ ಯಾರು ?
2) ರನ್ನ ಕವಿಯ ಜನ್ಮಸ್ಥಳ ಯಾವುದು ?
3) ಶ್ರೀಪಾದರಾಯರ ಕೀರ್ತನೆಗಳ ಅಂಕಿತ ನಾಮ ಯಾವುದು ?
4) 'ಮೊಲದ ಕೋಡಾದುದು ಸೊಗಂ' ಪದ್ಯಭಾಗವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?
5) ಕವಿ ಸಿದ್ಧಲಿಂಗಯ್ಯನವರ ಪ್ರಕಾರ ಪಡುವಣದ ಏಳೂರ ಸಂತೆ ಯಾವುದು ?

## ಭಾಗ – 2

## (ಗದ್ಯ)

IV. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ : (1×8=8)

1) ಗುಲಾಬಿ ಟಾಕೀಸಿನಿಂದ ಜನಜೀವನದಲ್ಲಾದ ಬದಲಾವಣೆಗಳೇನು ? ವಿವರಿಸಿರಿ.
2) ಡಾರ್ವಿನ್ ಮತ್ತು ವ್ಯಾಲೆಸ್‌ರ ಚಿಂತನೆಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ಕುರಿತು ಬರೆಯಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ : (1×8=8)

1) ಪೆಟ್ರಿಸಿಯಾಳ ಬದುಕಿನ ಯಶೋಗಾಥೆಯನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

2) ಗೌಡರ ಮನೆಯ ಶೋಷಣೆಗೆ ಒಳಗಾದ ರಂಗಪ್ಪನ ಕುಟುಂಬದ ಪರಿಸ್ಥಿತಿಯನ್ನು ಕುರಿತು ಬರೆಯಿರಿ.

ಇ) ಕೆಳಗಿನವುಗಳಲ್ಲಿ ಒಂದಕ್ಕೆ ಒಂದು ಪುಟದಷ್ಟು ಟಿಪ್ಪಣಿ ಬರೆಯಿರಿ : (1×5=5)

1) ಮೇರಿಯನ್      2) ರೋಮಹರ್ಷಣ

V. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಪ್ರಬಂಧವನ್ನು ಬರೆಯಿರಿ : (1×5=5)

1) ಲಿಲ್ಲೀಬಾಯಿ      2) ಮೆಗುಮಿ

VI. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : (4×1=4)

1) ವೈದೇಹಿ ಎಂಬ ಕಾವ್ಯನಾಮ ಯಾವ ಲೇಖಕಿಯದು ?

2) ದೇವನೂರು ಮಹಾದೇವರ ಕಥಾಸಂಕಲನ ಯಾವುದು ?

3) ರೋಮಹರ್ಷಣರನ್ನು ಶಿಷ್ಯನನ್ನಾಗಿ ಸ್ವೀಕರಿಸಿದವರು ಯಾರು ?

4) ವಿಕಾಸವಾದದ ಪಿತಾಮಹ ಯಾರು ?

## ಭಾಗ – 3

## (ಕ್ರಿಯಾತ್ಮಕ ಕನ್ನಡ)

VII. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ : (1×8=8)

1) ಜಾಹೀರಾತು ಎಂದರೇನು ? ಜಾಹೀರಾತುಗಳ ಉದ್ದೇಶ ಮತ್ತು ಪಾತ್ರವೇನು ? ವಿವರಿಸಿರಿ.

2) ಅರ್ಥ ವ್ಯತ್ಯಾಸದ ಬಗೆಗಳು ಯಾವುವು ? ಹಾಗೂ ಅರ್ಥ ವ್ಯತ್ಯಾಸಗಳಿಗೆ ಕಾರಣಗಳೇನು ? ತಿಳಿಸಿರಿ.

VIII. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) ಜಾಹೀರಾತುದಾರರಿಗೆ ಒದಗುವ ಅನುಕೂಲಗಳು.

2) ಭಾಷೆಯ ರಚನೆಯ ಸ್ವರೂಪ.

IX. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಸ್ಕೂಟರ್ ಜಾಹೀರಾತಿನ ಘೋಷವಾಕ್ಯ ಯಾವುದು ?

2) ಹಳೆಗನ್ನಡದಲ್ಲಿ ಅಮ್ಮ ಎಂದರೆ ಯಾರು ?

---